ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರ ಬಿಲ್ ಬಾಕಿ

63(194); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಪ್ರಸ್ತುತ ಲೋಕೋಪಯೋಗಿ ಇಲಾಖೆಯವರು ವಿವಿಧ ವರ್ಗಗಳ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಿಲ್ ಬಾಕಿ ಮೊತ್ತದ ವಿವರಗಳೇನು; ಹಿಂದಿನ ಸರ್ಕಾರದ ಅವಧಿಯಲ್ಲಿ ಪಾವತಿಸಬೇಕಾದ ಬಿಲ್ ಬಾಕಿ ಮೊತ್ತ ಎಷ್ಟು;

ಆ) ಶಾಸಕರ ವಿವೇಚನೆಯಡಿ ಕೈಗೊಳ್ಳಬೇಕಾಗಿದ್ದ ಅಪೆಂಡಿಕ್ಸ್ – 'ಸಿ' ಕಾಮಗಾರಿಯ ಅನುಮೋದನೆ ಕುರಿತಾದ ವಿವರಗೇನು;

ಇ) ಶಾಸಕರುಗಳು ತಮ್ಮ ಕ್ಷೇತ್ರ ವ್ಯಾಪ್ರತಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಅನುವು ಮಾಡಿಕೊಡುವ ದಿಶೆಯಲ್ಲಿ ಸರ್ಕಾರದ ಸಕಾಲಿಕ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಪ್ರಸ್ತುತ ವಿವಿಧ ವರ್ಗಗಳ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಬಿಲ್ಲುಗಳ ಮೊತ್ತ ಡಿಸೆಂಬರ್ 2013ರ ಅಂತ್ಯಕ್ಕೆ ₹ 127903.98 ಲಕ್ಷ.

ಹಿಂದಿನ ಸರ್ಕಾರದ ಅವಧಿಯಲ್ಲಿ ಪಾವತಿಸಬೇಕಾಗಿದ್ದ ಬಾಕಿ ಬಿಲ್ಲುಗಳ ಮೊತ್ತ ಏಪ್ರಿಲ್, 2013ರ ಅಂತ್ಯಕ್ಕೆ ₹ 131807.38 ಲಕ್ಷ

ಆ) ಪ್ರತಿ ಆರ್ಥಿಕ ವರ್ಷದಲ್ಲಿ ಆಯವ್ಯಯ ಲಭ್ಯತೆಯನ್ನು ಆಧರಿಸಿ, ಕಾಮಗಾರಿಗಳ ಅಪೆಂಡಿಕ್ಸ್ – 'ಇ' ಯನ್ನು ಸಿದ್ಧಪಡಿಸುವಾಗ, ಚುನಾಯಿತ ಜನಪ್ರತಿನಿಧಿಗಳ ಹಾಗೂ ಕಾಮಗಾರಿಗಳ ಅಗತ್ಯಕ್ಕನುಗುಣವಾಗಿ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಂಡು ಅನುಮೋದನೆ ನೀಡಲಾಗುವುದು.

ಇ) ಮಾನ್ಯ ಶಾಸಕರುಗಳು ತಮ್ಮ ಕ್ಷೇತ್ರ ವ್ಯಾಪ್ರತಿಯಲ್ಲಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಸೂಚಿಸುವ ಪಟ್ಟಿಯಲ್ಲಿನ ಕಾಮಗಾರಿಗಳ ಆದ್ಯತ

ಮೇರೆಗೆ ಹಾಗೂ ಅನುದಾನ ಲಭ್ಯತೆಯನ್ನು ಆಧರಿಸಿ, ಅಂತಹ ಕಾಮಗಾರಿಗಳನ್ನು ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಸೇರ್ಪಡೆ ಮಾಡಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಹೆದ್ದಾರಿ ಅಭಿವೃದ್ಧಿ ಯೋಜನೆ

64(195); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಎರಡು ಹಂತಗಳಲ್ಲಿ ಅಭಿವೃದ್ಧಿಪಡಿಸಲಾಗುವ ರಸ್ತೆ ಕಾಮಗಾರಿಗಳ ಜಿಲ್ಲಾವಾರು ಕಿ.ಮೀ ಉದ್ದದ ವಿವರಗಳು ಮತ್ತು ಅವುಗಳಿಗೆ ನಿಗಧಿಪಡಿಸಲಾಗಿರುವ ಅನುದಾನದ ವಿವರಗಳೇನು;

ಆ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಾಗೂ ವಿಸ್ತರಣೆ ಮತ್ತು ಸುವ್ಯವಸ್ಥಿತ ನಿರ್ವಹಣೆಗಾಗಿ ಸರ್ಕಾರದ ಕ್ರಮಗಳೇನು;

ಇ) ರಾಜ್ಯ ಹೆದ್ದಾರಿಗಳ ಕುರಿತು ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮಗಳೊಂದಿಗೆ ಆರ್ಥಿಕ ವರ್ಷದಲ್ಲಿ ಇಲಾಖೆಯವರು ಹೊಂದಿರುವ ಗುರಿ ಮತ್ತು ಸಾಧನೆಯ ವಿವರಗಳೇನು;

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–1 ರಡಿಯಲ್ಲಿ 3567.00 ಕಿ.ಮೀ ಗಳನ್ನು ₹ 1439.00 ಕೋಟಿಗಳ ಮೊತ್ತದಲ್ಲಿ ಹಾಗೂ ಹಂತ–2ರಡಿಯಲ್ಲಿ 3745.00 ಕಿ.ಮೀ ಗಳನ್ನು ₹ 1498.00 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಲಾಗಿದೆ.)

ಆ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ರಸ್ತೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, ಯೋಜನೆಯ ವ್ಯವಸ್ಥಿತ ಅನುಷ್ಠಾನಕ್ಕೆ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಕಾಮಗಾರಿಗಳು ಪೂರ್ಣಗೊಂಡ ನಂತರ